ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 70-78
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಗದಗ ಜಿಲ್ಲೆಯ ರಾಷ್ಟ್ರಕೂಟರ ಶಾಸನಗಳಲ್ಲಿನ ಶಾಸನೋಕ್ತ ಸ್ಥಳನಾಮಗಳು

**ಡಾ.ಶಂಭುಲಿಂಗನಗೌಡ ಬೆಳಕೇರಿ**
ಸಹಾಯಕ ಉಪನ್ಯಾಸಕರು, ಭಾಷಾವಿಜ್ಞಾನ, ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**Abstract:**
*ಸ್ಥಳನಾಮಗಳು ಒಂದು ಪ್ರದೇಶದ ಇತಿಹಾಸ, ಸಂಸ್ಕೃತಿ, ಭೌಗೋಳಿಕ ಪರಿಸರ ಹಾಗೂ ಸಾಮಾಜಿಕ ಜೀವನವನ್ನು ಅರಿಯಲು ಪ್ರಮುಖ ಆಧಾರಗಳಾಗಿವೆ. ಗದಗ ಜಿಲ್ಲೆಯ ರಾಷ್ಟ್ರಕೂಟರ ಕಾಲದ ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳು ಆ ಕಾಲದ ಆಡಳಿತಾತ್ಮಕ ವ್ಯವಸ್ಥೆ, ಧಾರ್ಮಿಕ ಕೇಂದ್ರಗಳು, ವಾಣಿಜ್ಯ ಚಟುವಟಿಕೆಗಳು ಹಾಗೂ ಜನಜೀವನದ ವಿವಿಧ ಆಯಾಮಗಳನ್ನು ಪ್ರತಿಬಿಂಬಿಸುತ್ತವೆ. ಈ ಅಧ್ಯಯನವು ರಾಷ್ಟ್ರಕೂಟರ ಶಾಸನಗಳಲ್ಲಿ ಕಂಡುಬರುವ ಸ್ಥಳನಾಮಗಳನ್ನು ಸಂಗ್ರಹಿಸಿ ಅವುಗಳ ಭಾಷಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ವಿಶ್ಲೇಷಿಸುತ್ತದೆ. ಸ್ಥಳನಾಮಗಳ ರೂಪಾಂತರ, ವ್ಯುತ್ಪತ್ತಿ ಹಾಗೂ ಪ್ರಸ್ತುತ ಭೌಗೋಳಿಕ ಗುರುತಿನೊಂದಿಗೆ ಅವುಗಳ ಸಂಬಂಧವನ್ನು ಪರಿಶೀಲಿಸಲಾಗಿದೆ. ಶಾಸನೋಕ್ತ ಸ್ಥಳನಾಮಗಳು ಗದಗ ಪ್ರದೇಶದ ಪ್ರಾಚೀನ ಇತಿಹಾಸ ಮತ್ತು ಪ್ರಾದೇಶಿಕ ಬೆಳವಣಿಗೆಯನ್ನು ಪುನರ್ನಿರ್ಮಿಸಲು ಪ್ರಮುಖ ಸಾಕ್ಷ್ಯಗಳಾಗಿವೆ ಎಂಬುದನ್ನು ಈ ಅಧ್ಯಯನವು ತೋರಿಸುತ್ತದೆ. ಈ ಮೂಲಕ ಕರ್ನಾಟಕದ ಸ್ಥಳನಾಮ ಅಧ್ಯಯನಕ್ಕೆ ಹಾಗೂ ಶಾಸನಶಾಸ್ತ್ರೀಯ ಸಂಶೋಧನೆಗೆ ಹೊಸ ಆಯಾಮವನ್ನು ಒದಗಿಸುತ್ತದೆ.*

**Keywords:** *ರಾಷ್ಟ್ರಕೂಟರು, ಗದಗ ಜಿಲ್ಲೆ, ಶಾಸನಗಳು, ಸ್ಥಳನಾಮಗಳು, ಸ್ಥಳನಾಮಶಾಸ್ತ್ರ*

## ಪೀಠಿಕೆ

ನಮ್ಮ ನಾಡಿನ ಪೂರ್ವ ಇತಿಹಾಸ, ಗತವೈಭವ, ಸಾಂಸ್ಕೃತಿಕ ಸ್ಥಿತಿ–ಗತಿಗಳ ಕುರಿತು ಅರಿತುಕೊಳ್ಳಬೇಕಾದರೆ ಇತಿಹಾಸದ ಅಧ್ಯಯನ ಅವಶ್ಯಕವಾಗಿರುತ್ತದೆ. ಇತಿಹಾಸದ ಕುರಿತು ಸ್ಪಷ್ಟವಾದ ಮಾಹಿತಿ ಒದಗಿಸುವಲ್ಲಿ ಇತಿಹಾಸದ ಆಧಾರಗಳು ಪ್ರಮುಖ ಪಾತ್ರವಹಿಸುತ್ತವೆ. ಅಂತಹ ಆಧಾರಗಳಲ್ಲಿ ಮುಖ್ಯವಾದದ್ದು ಶಾಸನಗಳಾಗಿವೆ. ಸ್ಥಳನಾಮಗಳು ತಮ್ಮದೇ ಊರಿನ ವಿಶೇಷತೆಗಳೊಂದಿಗೆ ಬೆಸೆಯಲಪ್ಪಟ್ಟಿರುತ್ತವೆ. ವೈಯಾಕರಣಿ ಪಾಣಿನಿಯು ಊರುಗಳ ಹೆಸರುಗಳು ಆಕಸ್ಮಿಕವಲ್ಲ ಸಾಮಾಜಿಕ, ಚಾರಿತ್ರಿಕ ಸ್ಥಿತಿಗತಿಗಳ ಪರಿಣಾಮವಾಗಿ ಉದ್ಭವಗೊಂಡ ಅರ್ಥಪೂರ್ಣ ಘಟಕಗಳು ಎನ್ನುತ್ತಾನೆ.

ಶಾಸನ ಎಂಬ ಪದವು ಸಂಸ್ಕೃತದ 'ಶಾಸ್' ಎಂಬ ಧಾತುವಿನಿಂದ ವುತ್ಪತ್ತಿಗೊಂಡಿದೆ. ಇದರ ಅರ್ಥ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂದು ಎಂದರ್ಥ. ಶಾಸನ ಎಂದರೆ, ಪ್ರಾಚೀನ ಕಾಲದಲ್ಲಿ ರಾಜರ ಆಜ್ಞೆಗಳು ಎಂದು ಕರೆಯಲಾಗುತ್ತಿತ್ತು. ಶಾಸನದ ಕುರಿತು ಕೌಟಿಲ್ಯನು ತನ್ನ ಅರ್ಥಶಾಸ್ತ್ರ ಗ್ರಂಥದಲ್ಲಿ "ಶಾಸನ (ಎಂಬ ಪದ) ರಾಜರ

***Please cite this article as:*** ಶಂಭುಲಿಂಗನಗೌಡ ಬೆಳಕೇರಿ. (2026). ಗದಗ ಜಿಲ್ಲೆಯ ರಾಷ್ಟ್ರಕೂಟರ ಶಾಸನಗಳಲ್ಲಿನ ಶಾಸನೋಕ್ತ ಸ್ಥಳನಾಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 5(2), 70–78

ಆಜ್ಞೆಗಳನ್ನು ತಿಳಿಸುವ ಬರಹವನ್ನು ಹೇಳುತ್ತದೆ"[1] ಹಾಗೂ ಶುಕ್ರಚಾರ್ಯನು ಶಾಸನದ ಕುರಿತು ಶಾಸನ ಎಂದರೆ "ರಾಜರ ಆಜ್ಞೆ, ರಾಜನ ಮುದ್ರಾ ಸಹಿತವಾದ ರಾಜಾಜ್ಞೆ, ಬರಹ ರೂಪದಲ್ಲಿರುವ ರಾಜಾಜ್ಞೆಗಳು ಮತ್ತು ರಾಜನು ಬರಹದ ಮೂಲಕ ಒಂದೆಡೆಯಲ್ಲಿ ತನ್ನ ಮಾಂಡಲಿಕ ಅಧಿಕಾರಿಗಳಿಗೆ ನೀಡುವ ರಾಜಾಜ್ಞೆಗಳಾದರೆ, ಇನ್ನೊಂದೆಡೆಯಲ್ಲಿ ಪ್ರಜೆಗಳಿಗೆ ನೀಡುವ ಆಜ್ಞೆಗಳು ಆಗಿವೆ"[2] ಎಂದು ಅರ್ಥೈಸುತ್ತಾನೆ. ಸಾಮಂತ ಅರಸರಿಗೆ, ಮಾಂಡಳೀಕರಿಗೆ, ನಾಡಿನ ಪ್ರಜೆಗಳಿಗೆ ಅವರ ಜವಾಬ್ದಾರಿಗಳ ಕುರಿತು, ನಾಡಿನ ಒಳಿತಿಗಾಗಿ, ಧರ್ಮದ ಪರಿಪಾಲನೆಗಾಗಿ ರಾಜಮಹಾರಾಜರು ನೀಡುವ ಆಜ್ಞೆಗಳೇ ಶಾಸನಗಳು. ಶಾಸನಗಳು ಮೂಲತಃ ದಾನ ಸಂಬಂಧವಾದ ರಾಜಾಜ್ಞೆಗಳಾಗಿದ್ದು, ಕಾಲಾಂತರದಲ್ಲಿ ವಿಶಾಲ ಅರ್ಥವನ್ನು ಪಡೆದುಕೊಂಡವು. ಶಾಸನಗಳು ಕಲ್ಲು, ತಾಮ್ರ, ಬೆಳ್ಳಿ, ಶಂಖ, ದಂತ, ಮಣ್ಣಿನ ಮಡಕೆ, ಮರ, ಪ್ರಾಣಿಗಳ ಚರ್ಮ ಮುಂತಾದ ವಸ್ತುಗಳ ಮೇಲೆ ಬರೆಯಲಾದ ಬರವಣಿಗೆಗಳನ್ನು ಶಾಸನವೆಂದು ಕರೆಯಲಾಗುತ್ತದೆ.

**ರಾಷ್ಟ್ರಕೂಟರ ಶಾಸನಗಳಲ್ಲಿನ ಶಾಸನೋಕ್ತ ಸ್ಥಳನಾಮಗಳು**

ವಿಶ್ವದ ಪ್ರಾಚೀನತಮವಾದ ಸಂಸ್ಕೃತಿ ಮತ್ತು ಇತಿಹಾಸಗಳಲ್ಲಿ ಭಾರತದ ಸಂಸ್ಕೃತಿ ಮತ್ತು ಇತಿಹಾಸ ಪ್ರಮುಖವಾದುದು. ಅದು ಸುಮಾರು ಹದಿನಾರನೆಯ ಶತಮಾನದವರೆಗೂ ಭೂಪಟದಲ್ಲಿ ಹಲವರನ್ನು ಆಕರ್ಷಿಸಿದ ಕೇಂದ್ರ ಬಿಂದುವಾಗಿತ್ತು. ಇಂತಹ ಸ್ಥಾನವನ್ನು ಪಡೆಯಲು ಹಲವು ರಾಜಮನೆತಗಳು ಕಾರಣವಾಗಿದ್ದು ಕೊಡುಗೆಗಳನ್ನಿತ್ತಿವೆ. ಕ್ರಿ.ಶ.ಎಂಟರಿಂದ ಹತ್ತನೆಯ ಶತಮಾನದವರೆಗೂ ಭರತಖಂಡದ ಬಹುತೇಕ ಭೂಭಾಗವನ್ನು ಏಕಾತಪತ್ರದಲ್ಲಿ ಆಳ್ವಿಕೆ ನಡೆಸಿದವರು ರಾಷ್ಟ್ರಕೂಟರು. ಇವರ ವೈಭವಪೂರಿತ ಆಳ್ವಿಕೆಯು ಭಾರತದ ಹೆಗ್ಗಳಿಕೆಗೆ ಪೊಷಕವಾಗಿದೆ. ಹೆಮ್ಮೆಯ ವಿಚಾರವೆಂದರೆ, ರಾಷ್ಟ್ರಕೂಟರು ಕನ್ನಡ ಮೂಲದವರು ಮತ್ತು ಇವರ ಆಡಳಿತ ಭಾಷೆ ಕನ್ನಡವಾಗಿತ್ತು.

ಗದಗ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಶಾಸನಗಳಲ್ಲಿ ಉಲ್ಲೇಖವಾಗಿರುವ ಹತ್ತು ಗ್ರಾಮಗಳ ಸ್ಥಳನಾಮಗಳನ್ನು ಗುರುತಿಸಿ ಸ್ಥಳನಾಮಗಳ ನಿಷ್ಪತ್ತಿ ನಿರ್ಣಯ ಮಾಡುವ ಪ್ರಯತ್ನ ಮಾಡಲಾಗಿದೆ. ಭಾಷಾವೈಜ್ಞಾನಿಕ ನೆಲೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ಸ್ಥಳನಾಮಗಳ ಶಾಬ್ದಿಕ ರೂಪವನ್ನು ಆಕಾರಾದಿಯಾಗಿ ವಿಶ್ಲೇಷಿಸಲಾಗಿದೆ. ಶಬ್ದದ ಪ್ರಾಚೀನತಮ ರೂಪವನ್ನು ಮೊದಲು ಗುರುತಿಸಿ ಅನಂತರ ಭಾಷಿಕ ಪಲ್ಲಟ, ಧ್ವನಿ ವ್ಯತಾಸ ಸ್ವರ ಮತ್ತು ಅಕ್ಷರಲೋಪ ತದ್ಭವರೂಪ ಮತ್ತು ಸೌಲಭ್ಯಾಕಾಂಕ್ಷೆಯಿಂದಾಗಿರುವ ಭಾಷಿಕ ಬದಲಾವಣೆಗಳನ್ನು ಪರಿಶೀಲಿಸಿ ನಿಷ್ಪತ್ತಿ ನಿರ್ಣಯ ಮಾಡಲಾಗುವುದು. ನಿರ್ದಿಷ್ಟ ಆಕೃತಿಮಾ ಮತ್ತು ವಾರ್ಗಿಕ ಆಕೃತಿಮಾಗಳ ಅರ್ಥ ನಿಷ್ಪತ್ತಿ ಮತ್ತು ನಿರ್ಣಯವನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

| ಕ್ರ. ಸಂ | ಶಾಸನೋಕ್ತ ಸ್ಥಳನಾಮ | ಶಾಸನ ದೊರೆತ ಸ್ಥಳ | ಶಾಸನದ ಕಾಲ ಕ್ರಿ.ಶ |
|---|---|---|---|
| 1 | ಪ್ರ್ವಸುಂಡಿ | ಅಸುಂಡಿ | 925 |
| 2 | ಗಾವಿಡವಾಡ | ಗಾವರವಾಡ | 791 |
| 3 | ಚಿಞ್ಚಲಯತ | ಚಿಂಚಿಲ | 791 |
| 4 | ಬಟ್ಟೆಕೆಱೆ | ಬೆಟಗೇರಿ | 814 |
| 5 | ಮುಳ್ಗುನ್ದಾಖ್ಯೇ | ಮುಳಗುಂದ | 824 |
|  | ಸರಟಪೂರ | ಸೊರಟುರ | 778 |
| 6 | ನಾಗಾಯಿ | ನಾಗಾವಿ | 892 |
| 7 | ನೀರ್ಗುರ್ಂದ | ನೀಲಗುಂದ | 885 |

[1] ದೇವರಡ್ಡಿ ಹದ್ಲಿ. (ಸಂ.) ಶಾಸನ ಸಾಹಿತ್ಯ, ಪುಟ–32

[2] ನಾಯಕರ ಹುಲಗಪ್ಪ. ಶಾಸನಗಳ ಪ್ರಕಾರ ಮತ್ತು ಅವುಗಳ ಮಹತ್ವ, ಪುಟ–6

| | | | |
|---|---|---|---|
| 8 | ಮಾಸವಾಡಿ, ಮಾಸೇವಾಡಿ ಮೇಲಿವಡಿ ಮೇಲ್ವಿಡಿ, ಮೆಳವಾಡಿ | ಮೇವುಂಡಿ | 894 |
| 9 | ಕೊವುಕಗೆಜೇಯ | ಕೌಜಗೇರಿ | 897 |
| 10 | ರೋಣಂ | ರೋಣ | ಉಲ್ಲೇಖ ವಿಲ್ಲ |

**ಅಸುಂಡಿ**

ಗದಗ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ 5 ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ 1625.19 ಹೆಕ್ಟೇರ್‌ಗಳು. ಈ ಗ್ರಾಮವು ಬಾದಾಮಿ ಚಾಲುಕ್ಯರ ಕಾಲಾವಧಿಯಲ್ಲಿ ಪ್ರಮುಖ ವಿದ್ಯಾಕೇಂದ್ರವಾಗಿತ್ತೆಂದು ಶಾಸನದಲ್ಲಿ ಉಲ್ಲೇಖವಿದೆ. ಇಲ್ಲಿ ಎಲೆಯ ವ್ಯಾಪಾರ ವಹಿವಾಟು ನಡೆಯುತ್ತಿದ್ದು, ಇದಕ್ಕೆ 'ಎಲೆಯ ಪಸುಂಡಿ' ಎಂಬ ಪೂರ್ವನಾಮಧೇಯವಿತ್ತು ಎಂದು ಶಾಸನಾಧಾರದಿಂದ ತಿಳಿಯುತ್ತದೆ. ಬಾದಾಮಿ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ಐತಿಹ್ಯ ಒಂದಿದೆ. "ಈ ಪ್ರದೇಶದಲ್ಲಿ ಇಬ್ಬರು ಅಸುರರು ವಾಸವಾಗಿದ್ದು, ಬಿಂಕದಿಂದ ಇದ್ದ ಅಸುರವಾಸವಾದ ನೆಲೆ ಬಿಂಕದಕಟ್ಟಿಯಾಗಿತ್ತು. ಈ ಅಸುಂಡಿಯ ಅಸುರನಿಗೂ ಆ ಬಿಂಕದಕಟ್ಟಿ ಅಸುರನಿಗೂ ಮಲ್ಲಸಮುದ್ರ ಎಂಬಲ್ಲಿ ಯುದ್ಧ ಜರುಗಿ, ಅಸುಂಡಿಯ ಅಸುರ ಅಸು ನೀಗಿದ ಸ್ಥಳವೇ ಅಸುಂಡಿಯಾಯಿತು. ಬಿಂಕದ ಅಸುರ ನೆಲೆಸಿದ ಊರು ಬಿಂಕದಕಟ್ಟಿಯಾಯಿತು. 'ಯುದ್ಧ ಜರುಗಿದ ಪ್ರದೇಶ ಮಲ್ಲಸಮುದ್ರವೆಂದಾಯಿತು' ಎಂಬ ಪ್ರತಿತಿಯಿದೆ.

ಈ ಗ್ರಾಮದಲ್ಲಿ ದೊರೆತ ಶಾಸನ: ಉಡಚವ್ವ ದೇವಾಲಯದ ಕಲ್ಲು ಪಟ್ಟಿಕೆಯ ಮೇಲೆ

- ಶಾಸನದ ಕಾಲ: 925
- ಅರಸ ಮೂರನೆ ಇಂದ್ರನ ಕಾಲಕ್ಕೆ ಸಂಬಂಧಿಸಿದೆ.
- ಶಾಸನದ ಸಾಲುಗಳು 21
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮಗಳು
- 'ಬಙ್ಕಪುರ' [3] – ಇಂದಿನ 'ಬಂಕಾಪುರ'
- 'ಪ್ಪಸುಂಡಿ'[4] – ಇಂದಿನ 'ಅಸುಂಡಿ'
- ಪಸುಂಡಿ>ಅಸುಂಡಿ

ಶಬ್ದಾರಂಭದ ಪ>ಹ ಆಗುವ ವಿಶೇಷತೆ ಕನ್ನಡ ಭಾಷೆಯಲ್ಲಿ ಕಂಡು ಬರುತ್ತದೆ. ಇದರ ಪರಿಣಾಮವಾಗಿ ಪಸುಂಡಿ ಅಸುಂಡಿಯಾಗಿದೆ. ಪಸುಂಡಿ = "ದ್ವಿಘಟಿತ ಶಬ್ದ" ಪಸು+ಉಂಡಿ ಇದರ ಸಹಚರ್ಯದಲ್ಲಿ ಮೇವುಂಡಿ – ಇದರ ಮೂಲ ಮೇಳವೀಡು > ಮೇವಿಡು > ಮೇವುಂಡಿಯಾದಂತೆ. ಪಶು + ವೀಡು > ಪಸುವಿಡು > ಪಸುವಿಂಡಿ > ಪಸುಂಡಿ > ಹಸುಂಡಿ > ಅಸುಂಡಿ, ಆಗಿರುವ ಸಾಧ್ಯತೆ ಇದೆ. ಇದರರ್ಥ ದನಗಳು ಒಟ್ಟಿಗಿರುವ ನೆಲೆ ಅಥವಾ ಸ್ಥಳ.

ಪಸು[5]– ಧನಗಳು

**ಗಾವರವಾಡ**

ಗದಗ ತಾಲೂಕು ಕೇಂದ್ರದಿಂದ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿರುವ ಜನವಸತಿ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ. 1500.7 ಹೆಕ್ಟೇರ್‌ಗಳು. 'ಗಾವರವಾಡ' ಪ್ರದೇಶಸೂಚಕ ಸ್ಥಳನಾಮವಾಗಿದೆ. ಶಾಸನಗಳಲ್ಲಿ ಗಾವರವಾಡವೆಂದು ಉಲ್ಲೇಖವಿದೆ. "ಇದು ಮೊದಲು ಘಾತರವಾಡವಾಗಿದ್ದು ಯಾವುದೋ ಕಾರಣದಿಂದ ಈ ಪ್ರದೇಶದಲ್ಲಿ ಆಘಾತಕಾರಿ ಘಟನೆ ನಡೆಯಿತೆಂದು, ಅದಕ್ಕಾಗಿ ಈ ಗ್ರಾಮಕ್ಕೆ ಘಾತರವಾಡವೆಂಬ ಹೆಸರು ಬಂದಿದೆ" ಇದಕ್ಕೆ ಊರಲ್ಲಿನ ಹಲವು ಮಣ್ಣಿನ ದಿಬ್ಬಗಳು ಇಂದಿಗೂ ಸಾಕ್ಷಿಯಾಗಿವೆ. ಕ್ರಮೇಣ ಘಾತರವಾಡ ಗಾವರವಾಡವಾಯಿತೆಂದು ತಿಳಿದುಕೊಳ್ಳಬಹುದಾಗಿದೆ.

[3] SII Vol.XI,Pt,I No 34 BK 162
[4] ಅದೇ ಪುಟ
[5] ಅದೇ ಪುಟ

- ಶಾಸನದ ಕಾಲ: 791
- ಅಮೋಘವರ್ಷ ನೃಪತುಂಗ ಕಾಲಕ್ಕೆ ಸಂಬಂಧಿಸಿದೆ.
- ಶಾಸನದ ಸಾಲುಗಳು: 24
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮಗಳು
- ಗಾವಿಡವಾಡ[6]:ಇಂದಿನ ಗಾವರವಾಡ
- ವಾರಣಾಸಿ[7]:ವಾರಣಾಸಿ

ಗಾವರವಾಡೆ ಇದು ಮರಾಠಿ ಶಬ್ದ ಬಟ್ಟೆ ವ್ಯಾಪರಿಗಳ ಸ್ಥಳ ಎಂಬ ಅರ್ಥವನ್ನು ಹೊರಡುತ್ತದೆ. ಇದನ್ನು ಉದ್ಯೋಗ ವಾಚಿ ಸ್ಥಳನಾಮ ಎಂದು ಹೇಳಬಹುದು.

**ಚಿಂಚಿಲ**

ಗದಗ ತಾಲ್ಲೂಕ ಕೇಂದ್ರದಿಂದ ನೈರುತ್ಯಕ್ಕೆ 25 ಕಿ.ಮೀ. ದೂರದಲ್ಲಿರುವ ಜನವಸತಿ ಗ್ರಾಮ. ಗ್ರಾಮದ ಪ್ರಾಚೀನ ಹೆಸರು ಶಾಸನದ ಉಲ್ಲೇಖದಂತೆ 'ಚಿಂಚಿಲ'ವೆಂದಾಗಿತ್ತು. ಚಿಂಚ+ಇಲ=ಚಿಂಚಿಲ ಅಂದರೆ 'ಚಿಂಚನ ಮನೆ' ಎಂದರ್ಥ, ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ 1167.03 ಹೆಕ್ಟೇರ್‌ಗಳ ಬಯಲು ನಾಡಾಗಿದೆ. ಬಿಳಿ ಮತ್ತು ನೀಲಿ ಕಲ್ಲಿನ ಲಕ್ಷಣ ಹೊಂದಿದೆ. ಫಲವತ್ತಾದ ಕೆಂಪು ಮತ್ತು ಕಪ್ಪು ಮಣ್ಣಿನಿಂದ ಕೂಡಿದೆ. ಈ ಗ್ರಾಮದ ದಕ್ಷಿಣಕ್ಕೆ ಕಾಳಮ್ಮನ ಗುಡ್ಡ, ಉತ್ತರಕ್ಕೆ ಲಕ್ಷ್ಮಿ ಗುಡ್ಡಗಳಿವೆ. ಕಾಳಮ್ಮನ ಗುಡ್ಡದಲ್ಲಿ ಕೆಲವು ಕಲ್ಲಿನ ಗಣಿಗಳಿವೆ. ಇಲ್ಲಿಯ ಭೋವಿ ಜನಾಂಗ ಕಲ್ಲು ಕುಟಿಕೆಯನ್ನೆ ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದಾರೆ..

ಈ ಗ್ರಾಮದಲ್ಲಿ 4 ಶಾಸನಗಳು ಕಂಡು ಬರುತ್ತವೆ

**ಶಾಸನ: 1**

- ಕಾಲ: 791
- ಅಮೋಘವರ್ಷ ನೃಪತುಂಗ ಕಾಲಕ್ಕೆ ಸಂಬಂಧಿಸಿದೆ.
- ಶಾಸನದ ಸಾಲುಗಳು 32
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮಗಳು
- ಚಿಞ್ಚಲಯತ್ವ[8]– ಚಿಂಚಲಿ
- ವಾರಣಾಸಿ[9]–ವಾರಣಾಸಿ

**ಶಾಸನ: 2**

- ಕಾಲ – 897
- ಎರಡನೆ ಕೃಷ್ಣನ ಕಾಲಕ್ಕೆ ಸಂಬಧಿಸಿದೆ.
- ಶಾಸನದ ಸಾಲುಗಳು 18
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮಗಳು
- ಚಿಂಚಿಲ[10]–ಚಿಂಚಲಿ
- ಕೇರಳ[11]–ಕೇರಳ
- ಕಾಂಚಿ[12]–ಕಂಚಿ

**ಶಾಸನ: 3**

- ಕಾಲ 793
- ಒಂದನೇ ಅಮೋಘವರ್ಷ ನೃಪತುಂಗ ಕಾಲಕ್ಕೆ ಸಂಬಂಧಿಸಿದೆ.
- ಶಾಸನದ ಸಾಲುಗಳು 8
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮಗಳು
- ಚಿಞ್ಚಿಲಯ[13]–ಚಿಂಚಲಿ

---

6 SII Vol.XI,Pt,I ,No 13

7 ಅದೇ ಪುಟ

8 SII Vol.XVIII,No.13;BK 70

9 ಅದೇ ಪುಟ

10 SII Vol,XI ,Pt No,24

11 ಅದೇ ಪುಟ

12 ಅದೇ ಪುಟ

13 SII Vol.XI.Pt.I 15.BK 105

**ಶಾಸನ: 4**

- ಕಾಲ 825
- ಒಂದನೇ ಅಮೋಘವರ್ಷ ನೃಪತುಂಗ ಕಾಲಕ್ಕೆ ಸಂಬಧಿಸಿದೆ.
- ಶಾಸನದ ಸಾಲುಗಳು 17
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮಗಳು
- ಚಿಂಚಿಲ[14] – ಚಿಂಚಲ

ಮೇಲಿನ ಎಲ್ಲಾ ಶಾಸನಗಳನ್ನು ಗಮನಿಸಿದಾಗ ಎಲ್ಲಾ ಶಾಸನಗಳಲ್ಲಿ

ಚಿಞ್ಚಲ> ಚಿಂಚಿಲ> ಚಿಞ್ಚಿಲಯ> ಚಿಂಚಲ ಈ ರೀತಿಯ ಉಲ್ಲೇಖವಾಗಿವೆ.

**ಬೆಟಗೇರಿ**

ಗದಗ–ಬೆಟಗೇರಿ ಅವಳಿ ನಗರವಾಗಿದೆ. 'ಬಟ್ಟಕೆರೆ' ಎಂದು ಶಾಸನದಲ್ಲಿದೆ. ಬಟ್ಟಕೆರೆ ಎಂದರೆ 'ದುಂಡಗಿನ ಕೆರೆ' ಎಂದರ್ಥ. ಕೃತಪುರ ಮಹಾತ್ಮ ಕೃತಿಯಲ್ಲಿ

**ಶಾಸನ 1**

- ಕಾಲ:– 814
- ಎರಡನೆ ಕೃಷ್ಣನ ಕಾಲಕ್ಕೆ ಸಂಬಧಿಸಿದೆ.
- ಶಾಸನದ ಸಾಲುಗಳು 12
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- ಬಟ್ಟೆಕೆಱೆ[15]–ಬೆಟಗೇರಿ
- ಬಟ್ಟೆಕೆಱೆ > ಬೆಟ್ಟಗೆರೆ > ಬೆಟಗೇರಿ
- ಬಟ್ಟೆ–ದುಂಡಾದ
- ಕೆಱೆ–ಕೆರೆ ದುಂಡಾದ ಕೆರೆ

**ಮುಳಗುಂದ**

ಗದಗ ತಾಲೂಕ ಕೇಂದ್ರದಿಂದ ದಕ್ಷಿಣಕ್ಕೆ 18 ಕಿ.ಮೀ. ದೂರದಲ್ಲಿರುವ ಜನವಸತಿ ಗ್ರಾಮ. ಈ ಗ್ರಾಮದಲ್ಲಿ ಒಟ್ಟು 21 ಶಾಸನಗಳು ಕಂಡು ಬರುತ್ತವೆ. ಅದರಲ್ಲಿ ರಾಷ್ಟ್ರಕೂಟರ ಕಾಲದ ಒಂದು ಶಾಸನ ಕಂಡು ಬರುತ್ತದೆ. ಈ ಶಾಸನದಲ್ಲಿ ಗ್ರಾಮದ ಪ್ರಾಚೀನ ಹೆಸರು ಶಾಸನದ ಉಲ್ಲೇಖದಂತೆ 'ಮುಳ್ಗುನ್ದಾಖ್ಯೇ' ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣ. 3911.9103 ಹೆಕ್ಟೇರ್‌ಗಳು. ಬಯಲುನಾಡಾಗಿದ್ದು ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದೆ.

**ಶಾಸನ: 1**

- ಕಾಲ – 824
- ಎರಡನೆ ಕೃಷ್ಣನ ಕಾಲಕ್ಕೆ ಸಂಬಂಧಿಸಿದೆ.
- ಶಾಸನದ ಸಾಲುಗಳು 21
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- 'ಮುಳ್ಗುನ್ದಾಖ್ಯೇ'[16]– ಮುಳಗುಂದ

**ಸೊರಟೂರ**

ಗದಗ ತಾಲೂಕು ಕೇಂದ್ರದಿಂದ ದಕ್ಷಿಣಕ್ಕೆ 21 ಕಿ.ಮೀ. ದೂರದಲ್ಲಿದೆ. ಗ್ರಾಮದ ಪ್ರಾಚೀನ ಹೆಸರು 'ಸರಟಪೂರ' ಎಂದು ಶಾಸನಾಧಾರದಿಂದ ತಿಳಿಯುತ್ತದೆ. ಬಯಲು ನಾಡಾಗಿದ್ದು, ಕೆಂಪುಕಲ್ಲು, ಬೆಣಚು ಕಲ್ಲು, ಹಿಟಗಲ್ಲು, ಫಲವತ್ತಾದ ಕಪ್ಪು ಮತ್ತು ಕೆಂಪು ಮಣ್ಣಿನ ಲಕ್ಷಣ ಹೊಂದಿದೆ. ಪೂರ್ವದಿಕ್ಕಿಗೆ ನಂದಿ ಮರಡಿಗುಡ್ಡ ಮತ್ತು ಕ್ವಾರ ಮರಡಿಗುಡ್ಡಗಳಿವೆ. ಗುಡ್ಡದಲ್ಲಿ ಕಲ್ಲು ಮತ್ತು ಮಣ್ಣಿನ ಕ್ವಾರಿಗಳಿವೆ. 159.14 ಹೆಕ್ಟೇರ್ ಮೀಸಲು ಅರಣ್ಯ ಪ್ರದೇಶ ಹೊಂದಿದೆ.

ಈ ಗ್ರಾಮದಲ್ಲಿ ಒಟ್ಟು 14 ಶಾಸನಗಳು ಕಂಡು ಬರುತ್ತವೆ,[17] ಅವುಗಳಲ್ಲಿ ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗನ ಕಾಲದ ಶಾಸನವು ಪುರಾತನವಾಗಿದೆ. ಈ ಶಾಸನದಲ್ಲಿ ಸರಟವೂರ ಎಂಬ ಉಲ್ಲೇಖವಿದೆ.

---

14 SII Vol XI, Pt.I No 27 ;BK 102
15 SII Vol,XI,Pt,I,no,21
16 EI Vol,xiii,15 k,p190@ pl
17 SII Vol, I. XI Pt ,I 20, EI Vol,XXI P206-8

**ಶಾಸನ:** 1

- ಕಾಲ 778 ಕಾಲಕ್ಕೆ ಸಂಬಂಧಿಸಿದೆ.
- ಅಮೋಘವರ್ಷ ನೃಪತುಂಗ ಕಾಲಕ್ಕೆ ಸಂಬಂಧಿಸಿದೆ
- ಶಾಸನದ ಸಾಲುಗಳು 10
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- 'ಸರಟಪೂರ'[18] –ಸೊರಟೂರು
- ಸರಟವೂರು[19]> ಸರಟವುರು[20]> ಸೊರಟೂರ

**ನಾಗಾವಿ**

ಗದಗ ತಾಲೂಕ ಕೇಂದ್ರದಿಂದ ದಕ್ಷಿಣಕ್ಕೆ 6ಕಿ.ಮೀ ದೂರದಲ್ಲಿ ಇರುವ ಜನವಸತಿ ಗ್ರಾಮವಾಗಿದೆ. 928.31 ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಫಲವತ್ತಾದ ಕೃಷಿ ಭೂಮಿಯನ್ನು ಹೊಂದಿದೆ. ಈ ಗ್ರಾಮದಲ್ಲಿ 6 [21]ಶಾಸನಗಳು ಕಂಡು ಬರುತ್ತವೆ. ಈ ಗ್ರಾಮದ ಪ್ರಾಚೀನ ಹೆಸರು 'ನಾಗಾಯಿ'ಯೆಂದು ರಾಷ್ಟ್ರಕೂಟರ ಖೊಟ್ಟಿಗನ ಕಾಲದ ಶಾಸನದಲ್ಲಿದೆ. ಸ್ಥಳಿಯ ಐತಿಹ್ಯದ ಪ್ರಕಾರ ಈ ಪ್ರದೇಶದಲ್ಲಿ ನಾಗಾರ್ಜುನನೆಂಬ ರಾಕ್ಷಸ ವಾಸವಾಗಿದ್ದ ಕಾರಣ ಇದಕ್ಕೆ 'ನಾಗಾವಿ' ಎಂಬ ಸ್ಥಳನಾಮ ಬಂದಿದೆಯೆಂದು ಗ್ರಾಮಸ್ಥರ ಹೇಳುವರು. ಅಲ್ಲದೆ 'ಕೃತಪುರ ಮಹಾತ್ಮ'ಯಲ್ಲಿ "ಕೃತಪುರದ ಶ್ರೀವೀರನಾರಾಯಣ ದೇವಾಲಯದ ಸುತ್ತಲೂ ಅಂದು ಗಜಗದ ಗಿಡಗಳ ಮೇಳೆಯಿತ್ತೆಂದೂ ಅದರಲ್ಲಿ ನಾಗಾರ್ಜುನನೆಂಬ ರಾಕ್ಷಸನು ನೆಲೆಯೂರಿದ್ದನು. ಅವನು ಜನರನ್ನು ಪೀಡಿಸುತ್ತಿದ್ದುದರಿಂದ ವೀರನಾರಾಯಣನಿಗೂ ರಾಕ್ಷಸನಿಗೂ ಇಪ್ಪತ್ತೊಂದು ದಿನಗಳ ಕಾಲ ಯುದ್ಧವಾಯಿತು. ಯುದ್ಧದಲ್ಲಿ ನಾಗಾರ್ಜುನ ರಾಕ್ಷಸನು ಹತನಾದನು. ಈ ನಾಗಾರ್ಜುನನು ಮೂಲತಃ ನಾಗಾವಿಯಲ್ಲಿ ವಾಸವಾಗಿದ್ದನು. ಅವನಿಂದಾಗಿ ಈ ಗ್ರಾಮಕ್ಕೆ ನಾಗಾಪುರ/ನಾಗಗಿರಿ ಎಂದು ಸ್ಥಳನಾಮ ಬಂದಿದೆ. ಅದುವೆ ನಾಗಾವಿ ಎಂದು ಹೆಸರಾಯಿತೆಂದು ನೀರೂಪವಿದೆ"

**ಶಾಸನ:** 1

- ಕಾಲ 892 ಕಾಲಕ್ಕೆ ಸಂಬಂಧಿಸಿದೆ.
- ಖೋಟ್ಟಿಗದೇವನ ಕಾಲಕ್ಕೆ ಸಂಬಂಧಿಸಿದೆ
- ಶಾಸನದ ಸಾಲುಗಳು 58
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- ನಾಗವಾವಿ[22] –ನಾಗಾವಿ
- ವಾರಣಾಸಿ[23] ವಾರಣಾಸಿ
- ಕುರುಕ್ಷೇತ್ರ[24]

**ನೀಲಗುಂದ**

ಈ ಗ್ರಾಮವು ಗದಗ ತಾಲೂಕು ಕೇಂದ್ರದಿಂದ ನೈರುತ್ಯಕ್ಕೆ 27 ಕಿ.ಮೀ. ದೂರದಲ್ಲಿರುವ ಜನವಸತಿ ಗ್ರಾಮವಾಗಿದೆ. ಭೌಗೋಳಿಕ ವಿಸ್ತೀರ್ಣ 2476.77 ಹೆಕ್ಟೇರ್‌ಗಳು. ಅದರಲ್ಲಿ 2325.84 ಹೆಕ್ಟೇರ್ ಸಾಗುವಳಿ ಕ್ಷೇತ್ರ ಹೊಂದಿದೆ. ಬಯಲು ಪ್ರದೇಶವಾಗಿದೆ ಈ ಗ್ರಾಮದ ಪ್ರಾಚೀನ ಹೆಸರು 'ನೀರ್ಗುಂದ'ವೆಂದು[25] ಶಾಸನ ಉಲ್ಲೇಖಿಸುತ್ತದೆ. ಕಾಲಾಂತರದಲ್ಲಿ ಭಾಷಿಕ ಬದಲಾವಣೆ ಪ್ರಕ್ರಿಯೆಗೆ ಒಳಗಾಗಿ ನೀರ್ಗುಂದ> ನೀರಗುಂದ> ನೀಲಗುಂದವಾಗಿದೆ. ಈ ಗ್ರಾಮದಲ್ಲಿ ಒಟ್ಟು 4 ಶಾಸನಗಳು ಕಂಡು ಬರುತ್ತವೆ.[26] ಇದರಲ್ಲಿ ಕ್ರಿಶ.

[18] SII Vol, I. XI Pt ,I 12, BK 71 Of 1926-27
[19] ಅದೇ ಪುಟ
[20] ಅದೇ ಪುಟ
[21] ಧಾರವಾಡ ಜಿಲ್ಲಾ ಶಾಸನ ಸೂಚಿ ಗದಗ ತಾಲೂಕ ಪು 11
[22] SII Vol, XI Pt. in 041,Bk -21 of 1926-27
[23] ಅದೇ ಪುಟ
[24] ಅದೇ ಪುಟ
[25] SI E Vol-xxvii.2001.No/1 p233
[26] ಧಾರವಾಡ ಜಿಲ್ಲಾ ಶಾಸನ ಸೂಚಿ

866 ರ ರಾಷ್ಟ್ರಕೂಟರ ಅಮೋಘವರ್ಷನ ಕಾಲದ ಶಾಸನವು ಪುರಾತನವಾಗಿದೆ.

**ಶಾಸನ:** 1

- ಕಾಲ 885 ಕಾಲಕ್ಕೆ ಸಂಬಂಧಿಸಿದೆ.
- ಅಮೋಘವರ್ಷನ ಕಾಲಕ್ಕೆ ಸಂಬಂಧಿಸಿದೆ
- ಶಾಸನದ ಸಾಲುಗಳು 7
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- {ನಿಳ} ಗುನ್ದದಿ[27]
- ಮುಳಗುನ್ದದ[28]
- ನೀಲ> ಗುಂದ

ನೀಲ ಎಂಬುದಕ್ಕೆ ಕಪ್ಪು , ನೀಲಿ ಎಂಬ ಅರ್ಥೈಸಿದರೆ,[29] ಗುಂದ ಎಂಬುದು ಬೆಟ್ಟ, ಗುಡ್ಡಗಳನ್ನು[30] ಸೂಚಿಸುತ್ತದೆ. ಈ ಗ್ರಾಮದ ಸುತ್ತಲೂ ಕಪ್ಪಾದ ಬೃಹತ್ ಬಂಡೆಗಲ್ಲುಗಳಿರುವ ಬೆಟ್ಟಗಳು ಸುತ್ತುವರೆದಿವೆ. ಇವುಗಳಿಂದ ಈ ಗ್ರಾಮಕ್ಕೆ ನೀಲಗುಂದ ಎಂಬ ಸ್ಥಳನಾಮವಾಗಿದೆ.

**ಮೇವುಂಡಿ**

ಮುಂಡರಗಿ ತಾಲೂಕು ಕೇಂದ್ರದಿಂದ ಉತ್ತರಕ್ಕೆ 10 ಕಿ.ಮೀ. ದೂರದಲ್ಲಿದೆ. ಭೌಗೋಳಿಕ ವಿಸ್ತೀರ್ಣ 10327.23 ಎಕರೆಗಳು. ಗ್ರಾಮದ ಪ್ರಾಚೀನ ಹೆಸರು ಮಾಸವಾಡಿ, ಮಾಸೇವಾಡಿ, ಮೇಲಿವಡಿ, ಮೇಲ್ವಿಡಿ, ಮೆಳವಾಡಿ ಎಂಬ ಹೆಸರಿನಿಂದ ಮೌರ್ಯರ ಕಾಲದಲ್ಲಿ ಅಸ್ತಿತ್ವದಲ್ಲಿತ್ತು ಎಂದು ಕೆಲವು ಸಂಶೋಧಕರು ಅಭಿಪ್ರಾಯ ಪಟ್ಟಿದ್ದಾರೆ. ಮೇವುಂಡಿಯ ಮಾಸವಾಡಿ–140 ಮತ್ತು ಪುಲಿಗೇರಿ ನಾಡಿನ ಕೆಲವು ಭಾಗಗಳಲ್ಲಿ ಸೇವುಣ ಎಂಬ ಉಪರಾಜ ಮನೆತನವು ರಾಷ್ಟ್ರಕೂಟ ಚಾಲುಕ್ಯರ ಕಾಲದಲ್ಲಿ ಅವರಿಗೆ ಅಧೀನರಾಗಿ ರಾಜ್ಯಭಾರ ಮಾಡುತ್ತಿತ್ತು. ಈ ಸೇವುಣ ವಂಶದ ಮೂಲ ಪುರುಷ ಕುಪ್ಪೆಯರಸ. ರಾಷ್ಟ್ರಕೂಟ 2ನೇ ಕೃಷ್ಣನ ಕಾಲದಲ್ಲಿ ಬರೆಯಿಸಲ್ಪಟ್ಟ ಮೇವುಂಡಿಯ ಶಾಸನವೊಂದು ಕಪ್ಪೆಯರಸನು ಕೊಗಳಿ–500, ಮಸೇವಾಡಿ–140, ಪುಲಗೇರಿ–300 ಭಾಗಗಳನ್ನು ಆಳುತ್ತಿದ್ದನೆಂದು ಮತ್ತು ಇದು ಅವನ ಉಪರಾಜಧಾನಿಯಾಗಿತ್ತು ಎಂಬುದನ್ನು ವ್ಯಕ್ತಪಡಿಸುತ್ತದೆ. ಈ ಗ್ರಾಮದಲ್ಲಿ 8 ಶಿಲಾಶಾಸನಗಳಿವೆ. ಮತ್ತು ಒಂದು ವೀರಗಲ್ಲು ಕಂಡುಬರುತ್ತದೆ.

**ಶಾಸನ:** 1

- ಕಾಲ 897 ಕಾಲಕ್ಕೆ ಸಂಬಂಧಿಸಿದೆ.
- ಎರಡನೆ ಕೃಷ್ಣನ ಕಾಲಕ್ಕೆ ಸಂಬಂಧಿಸಿದೆ
- ಶಾಸನದ ಸಾಲುಗಳು 52
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- ಮೆಟುವಿಡು[31] – ಮೇವುಂಡಿ
- ಕುರುಕ್ಷೇತ್ರ, ಪ್ರಯಾಗ, ವಾರಣಾಸಿ, ಕೋಗಳಿ [32]

**ಶಾಸನ:2**

- ಕಾಲ 897 ಕಾಲಕ್ಕೆ ಸಂಬಂಧಿಸಿದೆ
- ಶಾಸನದ ಸಾಲುಗಳು: 7
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- ವೀಡು> ಮೇಟಿವೀಡಿ ಪಟ್ಟ> ಮೇವುಂಡಿ

ಮೇವುಂಡಿಯಲ್ಲಿ ದೊಡ್ಡ ಹಳ್ಳವೊಂದು ಹರಿಯುತ್ತಿದ್ದು, ಇಲ್ಲಿ ಮೊದಲು ಹೆಚ್ಚು ಬಿದಿರು (ಮೇಟ) ಬೆಳೆಯುತ್ತಿದ್ದರು ಅದರಿಂದ ಮೇಳಿ ಬೆಳೆಯುವ ಬೀಡು ಅಥವಾ ವೀಡು ಮೇಟಿವಿಡು ಎಂಬ ಸ್ಥಳನಾಮ ಬಂದಿದೆ. ಮುಂದೆ ಉಚ್ಚಾರದ ಬದಲಾವಣೆಯಿಂದ 'ಳ' ಕಾರ ಲೋಪವಾಗಿ ಮೇವುಂಡಿಯಾಗಿದೆ.

[27] SIE Vol. XXVII, 2001, No 1,p233
[28] ಅದೇ ಪುಟ
[29] ಸಂಕ್ಷಿಪ್ತ ಕನ್ನಡ ನಿಘಂಟು– ಪು–679
[30] ಸಂಕ್ಷಿಪ್ತ ಕನ್ನಡ ನಿಘಂಟು– ಪು–381
[31] SII Vol,XI pt,I No 22.BK No 56 of 1926-27
[32] ಅದೇ ಪುಟ

**ಕೌಜಗೇರಿ**

ರೋಣ ತಾಲೂಕು ಕೇಂದ್ರದಿಂದ ಪಶ್ಚಿಮ ದಿಕ್ಕಿಗೆ 23 ಕಿ.ಮೀ. ದೂರದಲ್ಲಿದೆ. ಹೊಳೆ ಆಲೂರ ಹೋಬಳಿಗೆ ಸೇರಿದೆ. ಗ್ರಾಮದ ಪ್ರಾಚೀನ ಹೆಸರು ಕೊವುಜಗೇರಿ ಎಂದಿದ್ದು ಕವಜಗೇರಿ> ಕೌಜಗೇರಿಯಾಗಿದೆ. ಭೌಗೋಳಿಕ ವಿಸ್ತೀರ್ಣ 3850.11 ಹೆಕ್ಟೇರ್‌ಗಳು. ಬಯಲುನಾಡು. ಕೃಷಿ ಭೂಮಿ ವಿಸ್ತೀರ್ಣ 3707.28 ಹೆಕ್ಟೇರ್‌ಗಳು. ಕಪ್ಪು ಮಣ್ಣಿನ ಲಕ್ಷಣ ಹೊಂದಿದೆ. ಈ ಗ್ರಾಮದಲ್ಲಿ ಒಟ್ಟು 4 ಶಾಸನಗಳು ಕಂಡು ಬರುತ್ತವೆ. ಅದರಲ್ಲಿ ರಾಷ್ಟ್ರಕೂಟರ ಕಾಲದ 2 ಶಾಸನಗಳು ಕಂಡು ಬರುತ್ತವೆ.[33]

**ಶಾಸನ:1**

- ಕಾಲ 933 ಕಾಲಕ್ಕೆ ಸಂಬದಿಸಿದೆ.
- ಈ ಮೂರನೆ ಗೋವಿಂದ ಕಾಲಕ್ಕೆ ಸಂಬಂಧಿಸಿದೆ
- ಶಾಸನದ ಸಾಲುಗಳು: 17
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- ಕೊವುಕಗೆಱೆಯ[34] – ಕೌಜಗೇರಿ ಇಲ್ಲಿ ಭಾಷಿಕ ಬದಲಾವಣೆಯಾಗಿದೆ
- ಓ–ಔ
- ವು – ಲೋಪವಾಗಿದೆ.
- **ಱೆ – ರಿ (ಎ–ಇ)**

**ರೋಣ**

ರೋಣ ತಾಲೂಕು ಮತ್ತು ಹೋಬಳಿಗೆ ಸೇರಿದ ಜನವಸತಿ ಗ್ರಾಮ. ಪ್ರಾಚೀನ ಶಾಸನಗಳಲ್ಲಿ 'ರೋಣ' ಎಂದೇ ಕರೆಯಲ್ಪಟ್ಟಿದೆ. ಪುಲಿಗೆರೆ–300 ಪ್ರಾಂತ್ಯಕ್ಕೆ ಸೇರಿದ್ದು, 104 ಮಹಾಜನರನ್ನು ಒಳಗೊಂಡ ಒಂದು ಅಗ್ರಹಾರವಾಗಿತ್ತು. ಭೌಗೋಳಿಕ ವಿಸ್ತೀರ್ಣ 6252.10 ಹೆಕ್ಟೇರ್‌ಗಳು. ಬಯಲುನಾಡು. ಕೃಷಿಭೂಮಿ ವಿಸ್ತೀರ್ಣ 5653.66 ಹೆಕ್ಟೇರ್‌ಗಳು. ಕಪ್ಪು ಮಣ್ಣು ಮತ್ತು ಕೆಂಪು ಮಣ್ಣಿನ ಲಕ್ಷಣ ಹೊಂದಿದ್ದು, 'ರೋಣ'ದ ಶ್ರೀ ಸಿವಾಲಯ ಎಂದು ಬಾದಾಮಿಯ ಆರೇರ ಓಣಿಯಲ್ಲಿಯ ಶಿಲಾಶಾಸನವೊಂದು ಹೆಸರಿಸುತ್ತದೆ. 'ದ್ರೋಣಪುರ'ವೆಂದು ಕರೆಯಲ್ಪಡುವ ಈ ಠಾಣದಲ್ಲಿ ಗುರುಕುಲವೊಂದಿತ್ತು. ರೋಣವು ದ್ರೋಣಾಚಾರ್ಯರಿಗೆ ಸಂಬಂಧಪಟ್ಟಿದ್ದೆಂದೂ 'ದ್ರೋಣ' ಎಂಬ ಪದವೇ 'ರೋಣ'ವಾಯಿತೆಂದು, ಇಲ್ಲಿ ದ್ರೋಣರಿಗೆ ದೇವಾಲಯವನ್ನು ಕಟ್ಟಲಾಗಿತ್ತೆಂದೂ, 105 ಮಹಾಜನರನ್ನು ಹೊಂದಿದ್ದ ಅಗ್ರಹಾರವೂ ಆಗಿತ್ತೆಂದು ತಿಳಿದುಬರುತ್ತದೆ. ರೋಣದಲ್ಲಿ ಪುರಾಣ ಪ್ರಸಿದ್ಧ ದ್ರೋಣಾಚಾರ್ಯರ ಗುಡಿಯ ಬಳಿ ಸಭಾಗೃಹ ಮತ್ತು ಅಭ್ಯಾಸ ಗೃಹಗಳಿದ್ದುದಾಗಿ ತಿಳಿದು ಬಂದಿದೆ. ಈ ಗ್ರಾಮದಲ್ಲಿ 11 ಶಾಸನಗಳು ಕಂಡು ಬರುತ್ತವೆ ಅವುಗಳಲ್ಲಿ ರಾಷ್ಟ್ರಕೂಟರ ಕಾಲದ 3 ಶಾಸನಗಳು, ಉಳಿದ ಶಾಸನಗಳು ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಾಗಿವೆ.

**ಶಾಸನ:1**

- ಶಾಸನದ ಕಾಲ 874
- ಅಮೋಘವರ್ಷನ ಕಾಲಕ್ಕೆ ಸಂಬಂಧಿಸಿದೆ
- ಶಾಸನದ ಸಾಲುಗಳು 14
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ
- ರೋಣಂ[35]– ರೋಣ

**ಶಾಸನ:2**

- ಕಾಲದ ಉಲ್ಲೇಖವಿಲ್ಲ
- ನಾಲ್ಕನೇಗೋವಿಂದ ಕಾಲಕ್ಕೆ ಸಂಬಂಧಿಸಿದೆ
- ಶಾಸನದ ಸಾಲುಗಳು 6
- ಶಾಸನದಲ್ಲಿ ಉಲ್ಲೇಖವಾದ ಸ್ಥಳನಾಮ

---

[33] ಧಾರವಾಡ ಜಿಲ್ಲ ಶಾಸನ ಸೂಚಿ ರೋಣ ತಾಲೂಕು, ಪು 16

[34] SII Vol. XI, Pt .I No 35

[35] EI Vol.XII.15H: SII Vol,XI.Pt,I ,No 16. Bk No,179.of.1926-27

- ರೋಣ[36]–ರೋಣ ಇಲ್ಲಿ ಭಾಷಿಕ ಬದಲಾವಣೆಯಾಗಿದೆ.
- ರೋಣಂ > ರೋಣ
- ಬಿಂದು(0) ಕಳೆದು ಹೋಗಿದೆ.

ದ್ರೋಣ ಪದದಿಂದ ರೋಣ ಬಂದಿರಬಹುದು ದ್ರೋಣಿ > ದ್ರೋಣ ಇವು ದೊಡ್ಡ ಕೆರೆ ಎನ್ನುವ ಅರ್ಥವನ್ನು ಸೂಚಿಸುತ್ತದೆ. ಇಲ್ಲಿ ದೊಡ್ಡ ಕೆರೆ ಇದೆ. ಆದರೆ ಉಚ್ಚಾರದ ಬದಲಾವಣೆಯಿಂದ ದ್ರೋಣ > ರೋಣ ಆಗಿರಬಹುದು.

ಸ್ಥಳನಾಮಗಳು ಮಾನವನ ಸಂಸ್ಕೃತಿಯನ್ನು ಅನಾವರಣಗೊಳಿಸಿದರೂ ಅದರ ಹಿಂದೆ ಆತನ ಮನೋವಿಜ್ಞಾನವಿದೆ. ಸ್ಥಳನಾಮಗಳು ಹುಟ್ಟುವ ಸಮಯಕ್ಕೆ ಇದ್ದ ನಿಜ ಸತ್ವವನ್ನು ಹೊರಹಾಕುವುದು ಕಷ್ಟ. ಆದರೆ ಅದರ ಸಮೀಪದ ದರ್ಶನ ಮಾಡಬಹುದು. ಮನುಷ್ಯನ ನೆಲೆಯನ್ನು ಗುರುತಾಗಿ ಗುರುತಿಸುವ ಸಂದರ್ಭ ಒದಗಿ ಬಂದಾಗ ಸುಲಭವಾಗಿ ನೆನಪಿಟ್ಟುಕೊಳ್ಳುವ ಸಲುವಾಗಿ ಪ್ರಾಕೃತಿಕ, ವ್ಯಕ್ತಿ, ವ್ಯವಹಾರ, ಘಟನೆ, ಸಾಂಸ್ಕೃತಿಕ ಸಂದರ್ಭಗಳು ಸ್ಥಳನಾಮಗಳ ನಿಷ್ಪತ್ತಿಗೆ ಕಾರಣವಾಗಿದೆ. ಈ ಸ್ಥಳನಾಮಗಳು ಆತನ ಬದುಕಿಗೆ ಪೂರಕವಾದ ಆಕರವಾಗಿದೆ.

ಭಾಷೆ ನಿಂತ ನೀರಲ್ಲ ಅದು ಸದ ಹರಿಯುವ ನದಿಯಂತೆ. ಅದು ಕಾಲಾನುಸಾರ ಹೊಸ ರೂಪ, ಪದ ಮತ್ತು ಅರ್ಥಗಳನ್ನು ಅಳವಡಿಸಿಕೊಂಡು ಸದಾ ಹರಿಯುವ ನದಿಯಂತೆ ಜೀವಂತವಾಗಿರುತ್ತದೆ. "ನಿತ್ಯ ಪರಿವರ್ತನಾಶೀಲವಾದ ಜೀವಂತ ಭಾಷೆಗಳಲ್ಲಿ ಧ್ವನಿವ್ಯತ್ಯಾಸ, ಅರ್ಥವ್ಯತ್ಯಾಸ. ವರ್ಣ ವ್ಯತ್ಯಾಸಗಳು ಉಂಟಾಗುತ್ತವೆ. ಇಂತಹ ವ್ಯತ್ಯಾಸಕ್ಕೊಳಗಾಗುವಲ್ಲಿ ಸ್ಥಳನಾಮಗಳು ಹೊರತಾದುದೇನಲ್ಲ. ಶಬ್ದದ ಅಥವಾ ಧ್ವನಿಯ ಅಳಿವು–ಉಳಿವುಗಳು ಕೇವಲ ನಮ್ಮ ಕೈಯಲ್ಲಿ ಇಲ್ಲ ನಿತ್ಯಪರಿವರ್ತನಾಶೀಲ ಆಡುನುಡಿಯಲ್ಲಿ ಈ ಪರಿವರ್ತನೆಗಳು ಅಗತ್ಯವಲ್ಲದಿದ್ದರೂ ಅನಿವಾರ್ಯ" ಕೆಲವು ಸಂದರ್ಭಗಳಲ್ಲಿ ಸ್ಥಳನಾಮಗಳು ತಮ್ಮ ಮೂಲರೂಪವನ್ನು ಕಳೆದುಕೊಂಡು ಹೊಸ ರೂಪವನ್ನು ಪಡೆದಿರುತ್ತವೆ. ಇನ್ನೂ ಕೆಲವು ಸ್ಥಳನಾಮಗಳು ಮತ್ತೊಂದು ಹೊಸ ಹೆಸರಿನಲ್ಲಿ ಸ್ಥಳದ ನಿರ್ಮಾಣವಾಗಿರುತ್ತದೆ. ಸ್ಥಳನಾಮಗಳ ಈಗಿನ ರೂಪವನ್ನು ಆಧಾರವಾಗಿಟ್ಟುಕೊಂಡು ಅರ್ಥ ನಿರ್ಣಯ ಮಾಡಲು ಹೊರಟರೆ ಅದು ಶಾಸ್ತ್ರೀಯವಾದ ಕ್ರಮವಾಗಿರುವುದಿಲ್ಲ. ಅರ್ಥ ವಿವರಣೆ ಮಾಡುವುದಕ್ಕೆ ಮುಂಚೆ ಆ ಪದದ ಪ್ರಾಚೀನತಮವಾದ ರೂಪವಾವುದೆಂಬುದನ್ನು ಮೊದಲು ಕಂಡು ಹಿಡಿಯಬೇಕು. ನಂತರ ಅರ್ಥೈಸಬೇಕು

**ಪರಾಮರ್ಶನ ಗ್ರಂಥಗಳು**


- ಕಲಬುರ್ಗಿ, ಎಂ.ಎಂ. *ಧಾರವಾಡ ಜಿಲ್ಲೆಯ ಶಾಸನ ಸೂಚಿ.* ಕರ್ನಾಟಕ ವಿಶ್ವವಿದ್ಯಾಲಯ
- *ಕನ್ನಡ ರತ್ನಕೋಶ.* (2022). ಕನ್ನಡ ಸಾಹಿತ್ಯ ಪರಿಷತ್ತು, ಪರಿಷ್ಕೃತ ಆವೃತಿ
- *ಕನ್ನಡ ನಿಘಂಟುಗಳು.* (1976). ಕನ್ನಡ ಸಾಹಿತ್ಯ ಪರಿಷತ್ತು, (ಎಂಟು ಸಂಪುಟಗಳು).
- *ಸಂಕ್ಷೇಪ್ತ ಕನ್ನಡ ನಿಘಂಟು.* (1977). *ಕನ್ನಡ ಸಾಹಿತ್ಯ ಪರಿಷತ್ತು.*
- Epigraphia Indica volume 13
- South Indian inscription volume – XI


[36] EI Vol.XIII, No,15-I p185-86